538(1229) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಈವರೆಗೆ ಎಷ್ಟು ಹಳದಿ ಕಾರ್ಡ್ ವಿತರಣೆ ಮಾಡಲಾಗಿದೆಯೇ ಹಾಗೂ ಎಷ್ಟು ಹಳದಿ ಕಾರ್ಡ್ ವಾಪಸ್ಸು ಪಡೆಯಲಾಗಿದೆ;

ಆ) ಬಡತನ ರೇಖೆಯ ಕೆಳಗಿನವರೆಗೆ ಹಳದಿ ಕಾರ್ಡ್ ಸಿಗದೆ ಅವರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಈ ರೀತಿ ಹಳದಿ ಕಾರ್ಡ್ ಸಿಗದ ಬಡವರಿಗೆ ಯಾವಾಗ ಕಾರ್ಡುಗಳನ್ನು ವಿತರಿಸಲಾಗುವುದು, ಇದಕ್ಕೇನಾದರೂ ಕಾಲಮಿತಿ ಕಾರ್ಯಕ್ರಮವನ್ನೇನಾದರೂ ಹಾಕಿಕೊಳ್ಳಲಾಗಿದೆಯೇ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) 2004ನೇ ಡಿಸೆಂಬರ್ ಮಾಹೆಯ ಅಂತ್ಯಕ್ಕೆ 63,38,990 ಹಳದಿ ಹಾಗೂ 719700 ಎಎವೈ ಕಾರ್ಡುಗಳನ್ನು ವಿತರಣೆ ಮಾಡಲಾಗಿದೆ. ಹಾಗೂ 8,54,583 ಬಿಪಿಎಲ್, ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿದೆ.

ಆ) ಹೌದು.

ಇ) ಪುನರ್ ಪರಿಶೀಲನಾ ಕಾರ್ಯಕ್ರಮವು 2005ನೇ ಜನವರಿಯಿಂದ ಪ್ರಾರಂಭಿಸಿ ಏಪ್ರಿಲ್ ಮಾಹೆಯ ಅಂತ್ಯಕ್ಕೆ ಮುಗಿದ ನಂತರ ಅರ್ಹರಿಗೆ ಬಿ.ಪಿ.ಎಲ್. ಪಡಿತರ ಚೀಟಿ ವಿತರಿಸಲಾಗುವುದು. ಈ ಸಂಬಂಧ ಸರ್ಕಾರಿ ಆದೇಶ ಸಂ: ಅನಾಸ 114 ಡಿಆರ್ಎ 04, ದಿನಾಂಕ 10-1-2005ರಂದು ಹೊರಡಿಸಿದ್ದು ಪುನರ್ ಸಮೀಕ್ಷೆ ಕಾರ್ಯ ರಾಜ್ಯಾದ್ಯಂತ ಪ್ರಾರಂಭವಾಗಿದೆ.

539(3) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿಯು ಹೊಸ ಜಿಲ್ಲೆಯಾದ ನಂತರ ಜಿಲ್ಲೆಯಲ್ಲಿ ಸ್ಥಾಪಿಸಲಾದ ಸಹಕಾರ ಬ್ಯಾಂಕುಗಳು ಎಷ್ಟು;

ಆ) ಉಡುಪಿಯಲ್ಲಿ ಕೇಂದ್ರ ಸಹಕಾರಿ ಬ್ಯಾಂಕನ್ನು ಎಂದಿನಿಂದ ಸ್ಥಾಪಿಸಲಾಗುವುದು;

ಇ) ಈ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳಾವುವು ಪ್ರಗತಿಯ ವಿವರ ನೀಡುವುದು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಉಡುಪಿಯು ಹೊಸ ಜಿಲ್ಲೆಯಾದ ನಂತರ ಜಿಲ್ಲೆಯಲ್ಲಿ ಮೂರು ಪ್ರಾಥಮಿಕ ಕೃಷಿ ಸಹಕಾರ ಬ್ಯಾಂಕುಗಳು ಸ್ಥಾಪನೆಯಾಗಿವೆ.

ಆ) ಉಡುಪಿ ಜಿಲ್ಲೆಯಲ್ಲಿ ಹೊಸ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು ಸ್ಥಾಪನೆ ಮಾಡಬೇಕಾದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಮಹಾಸಭೆಯಲ್ಲಿ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 14(1) ರೀತ್ಯಾ 2/3ನೇ ಬಹುಮತದಿಂದ ಎರಡು ಬಾರಿ ಬ್ಯಾಂಕಿನ ಮಹಾ ಸಭೆಯಲ್ಲಿ ಮಹಾಸಭೆಯಲ್ಲಿ ದಿನಾಂಕ 14.3.2001 ಹಾಗೂ ದಿನಾಂಕ 25–9–2004 ರಂದು ವಿಷಯ ಮಂಡಿಸಿದ್ದು ಈ ಬಗ್ಗೆ ಮೇಲಿನ ಕಾಯ್ದೆಯಂತೆ ಮಹಾ ಸಭೆಯಲ್ಲಿ ಒಪ್ಪಿಗೆಯಾಗಿರುವುದಿಲ್ಲ ಅದುದರಿಂದ ಹೊಸ ಬ್ಯಾಂಕ್ ಸ್ಥಾಪನೆಯಾಗಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

540(1065) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಬಡವರಿಗೆ ಇದುವರೆಗೆ ವಿತರಿಸಿರುವ ಬಿಪಿಎಲ್ ಕಾರ್ಡಿನ ಸಂಖ್ಯೆ ಎಷ್ಟು? (ಜಿಲ್ಲಾವಾರು, ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು);

ಆ) ಅನೇಕ ಅರ್ಹ ಫಲಾನುಭವಿಗಳಿಗೆ ಪಡಿತರ ಕಾರ್ಡು ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಈ) ಬಡತನ ರೇಖೆಗಿಂತ ಮೇಲಿರು ಅನೇಕ ವ್ಯಕ್ತಿಗಳು ಕಾರ್ಡನ್ನು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ ಇವುಗಳನ್ನು ರದ್ದುಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಊ) ಇದುವರೆಗೆ ರದ್ದುಪಡಿಸಿರುವ ಕಾರ್ಡಿನ ಸಂಖ್ಯೆ ಎಷ್ಟು?

ಶ್ರೀ ಹೆಚ್.ಕೆ. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಡಿಸೆಂಬರ್ 2004ರ ಅಂತ್ಯಕ್ಕೆ ವಿತರಿಸಿರುವ ಹಳದಿ ಪಡಿತರ ಚೀಟಿಗಳ ಸಂಖ್ಯೆ 6338990. ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿಗಳ ಸಂಖ್ಯೆ: 719700. ಜಿಲ್ಲಾವಾರು ಹಾಗೂ ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕುವಾರು ವಿವರ ಅನುಬಂಧ–1 ಮತ್ತು 2ರಲ್ಲಿ ಲಗತ್ತಿಸಿದೆ.

ಆ) ಹೌದು.

ಇ) ಅರ್ಹರು ಬಿಪಿಎಲ್ ಪಡಿತರ ಚೀಟಿಯಿಂದ ವಂಚಿತರಾಗಿರುವುದನ್ನು ಪತ್ತೆ ಹಚ್ಚಿ ಪಡಿತರ ಚೀಟಿ ವಿತರಿಸಲು ಜನವರಿ 2005 ರಿಂದ ಪುನರ್ ಸಮೀಕ್ಷಾಕಾರ್ಯ ಆರಂಭಿಸಲಾಗಿದೆ.